ಶಿಕ್ಷಣದಿಂದ ಶ್ರೇಷ್ಠತೆ
ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು
ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ)
ಜಯಲಕ್ಷ್ಮೀಪುರಂ, ಮೈಸೂರು–12

ಕನ್ನಡ ವಿಭಾಗದ ಪತ್ರಿಕೆ
A Mahajana Newsletter from the Dept. of Kannada




ಸಂಚಿಕೆ: 56 | 15 ನವೆಂಬರ್ 2025 | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | www.mahajanafgc.com | ಸಂಪಾದಕರು: ಸಿ.ಎಂ. ಕಿರಣ್‌ಕುಮಾರ್ ದೇಸಾಯ್, ಮನೋಜ್‌ಕುಮಾರ್ ಜೆ | ಕನ್ನಡ ವಿಭಾಗ | ಪುಟಗಳು : 04

# 'ಶೋಷಿತ ಸಮಾಜದ ನೈಜ ಸಂವೇದನೆಯ ಕಥೆಗಾರ'



ಸಂತೆ ಮೊಗ್ಗೇನಹಳ್ಳಿಯಲ್ಲಿ ಬೆಳೆದ ಗಣೇಶ್ ಅವರು ಬದುಕಿನ ಛಲ, ಪುಸ್ತಕ ಪ್ರೀತಿ, ಸಾಹಿತ್ಯದ ಒಲವುಗಳನ್ನು ಮೈಗೂಡಿಸಿ ಕೊಂಡಿದ್ದರು. ಬಡತನ, ಅಸ್ಪೃಶ್ಯತೆ, ಶೋಷಣೆಗಳನ್ನು ತನ್ನ ಕಥೆಯ ಮುಖ್ಯ ಅಂದರವನ್ನಾಗಿ ಮಾಡಿಕೊಂಡಿದ್ದರು. ಭಾರತೀಯ ಗ್ರಾಮೀಣ ಪ್ರದೇಶದ ನಿಜ ಚಿತ್ರಣಗಳನ್ನು ತಮ್ಮ ಕಥೆಗಳ ಮೂಲಕ ಬಿಂಬಿಸಿದ್ದಾರೆ. ಅಲ್ಲಿ ಬರುವ ಪ್ರತಿಯೊಂದು ಪಾತ್ರವು ಸಹಜವಾಗಿ ಮೂಡಿಬಂದಿದೆ. 'ಬುಗುರಿ' ಕಥೆಯ ಮೂಲಕ ಕನ್ನಡ ಸಾಹಿತ್ಯದಲ್ಲಿ ವಿಶೇಷವಾದ ಛಾಪನ್ನು ಮೂಡಿಸಿದರು. ಶೋಷಿತ ಸಮಾಜದ ನೈಜ ಘಟನೆಯನ್ನು ಕಥೆಯಾಗಿಸಿದವರು. 'ಚಲುವ' ಪಾತ್ರದ ಮೂಲಕ ದಲಿತ ಸಂವೇದನೆಯನ್ನು ಕನ್ನಡ ಕಥಾ ಜಗತ್ತಿಗೆ ಪರಿಚಯಿಸಿಕೊಟ್ಟರು. ಬುಗುರಿಯ ರೂಪದಲ್ಲಿ ಬಂದ ಆಸೆ ಕಮರಿ ಹೋಗುವ ಮನಸ್ಸಿನೊಳಗಿನ ನಿರ್ಲಕ್ಷಿತ ಸಮುದಾಯದ ಪರಿಸ್ಥಿತಿಯನ್ನು ಅನಾವರಣ ಮಾಡಿದ್ದಾರೆ. ಸಮಾಜದ ತಾರತಮ್ಯದ ಬದುಕಿನಿಂದ ನೊಂದಕಥೆಗಾರ, ಶೋಷಿತರ ಪರವಾಗಿ ಧೈರ್ಯಯುತ ಧ್ವನಿಯನ್ನು ಸಮಾಜದಲ್ಲಿ ಎತ್ತಿದವರು. ಹಳೆಯ ಚಡ್ಡಿ ಕಥೆಯ ಮೂಲಕ ಕನ್ನಡ ಕಥಾ ಜಗತ್ತನ್ನು ಪ್ರವೇಶ ಮಾಡಿದ ಇವರು ಸಮಾಜದಲ್ಲಿ ಆಳವಾಗಿ ಬೇರೂರಿರುವ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಅಸಮಾನತೆಗಳನ್ನು ಮೀರಿನಿಲ್ಲುವ ಎದ್ದೆಗಾರಿಕೆಯನ್ನು ಪ್ರಕಟಿಸುತ್ತಾರೆ. ನಿಷ್ಠುರ ವ್ಯಕ್ತಿತ್ವದಂತೆ ಕಂಡರು, ಮೃದುತ್ವದ ಮನಸನ್ನು ಹೊಂದಿದ್ದರು. ಬಾಲ್ಯದ ಅವಧಿಯಲ್ಲಿ ಅನುಭವಿಸಿದ ಕ್ರೌರ್ಯವನ್ನು ಸಮಾಜದಲ್ಲಿಯೂ ಕಂಡ ಗಣೇಶ್ ಅವರು ಶೋಷಿತ ಸಮುದಾಯದ ಮಾದರಿ ನಾಯಕರಾಗಿ ಬೆಳೆದವರು. ಅವರ

ಪು.ತಿ.ನೋ.

ಪುಟವಿನ್ಯಾಸ : ಡಿ.ದಾಸ್‌ಪ್ರಕಾಶ್




'ನಾನೆಂಬ ಕಿಂಚಿತ್ತು' ಆತ್ಮಕಥೆಯಲ್ಲಿ ಸಾಮಾಜಿಕ ಪ್ರತಿರೋಧ, ಬದುಕಿನ ಅಸಹಾಯಕತೆ, ಸಮುದಾಯದ ನಿಂದನೆಗಳು ಅಭಿವ್ಯಕ್ತವಾಗಿವೆ. ಗಣೇಶ್ ಅವರು ಕಥೆಯ ಮೂಲಕ ವೈಚಾರಿಕ ದೃಷ್ಟಿಕೋನ ಹಾಗೂ ಮಾನವೀಯ ನಿಲುವುಗಳನ್ನು ಪ್ರತಿಪಾದಿಸಿದ್ದಾರೆ. ದಲಿತ ಸಾಹಿತ್ಯದಲ್ಲಿ ಹಿರಿಯರಾದ ದೇವನೂರು ಮಹದೇವ, ಡಾ. ಸಿದ್ದಲಿಂಗಯ್ಯ ಹೊರತು ಪಡಿಸಿದರೆ ಶೋಷಿತ ಸಮೂಹವನ್ನು ಬರವಣಿಗೆಯಲ್ಲಿ ಅತ್ಯಂತ ಸಮರ್ಥವಾಗಿ ಕಟ್ಟಿಕೊಟ್ಟವರು.

ಬದುಕಿನ ವಾಸ್ತವಿಕತೆಗಳನ್ನು ತಿಳಿಸುವ ಕಥೆಗಾರ ಭಾರತದೊಳಗಿನ ನೈಜ ಪರಿಸ್ಥಿತಿಯನ್ನು ತನ್ನ ಕಥೆಯ ಒಳಗೆ ಅನಾವರಣ ಮಾಡಿದವರು. ಕನಸಿನ ಭಾರತದ ಕಟು ಸತ್ಯದ ಬಹುಮುಖಗಳನ್ನು ತಮ್ಮ ಕಥೆಯಲ್ಲಿ ಪ್ರಕಟಿಸಿದ್ದಾರೆ. ಸತ್ಯಗಳನ್ನು ಹೇಳಲು ಎದುರುವ ಪ್ರಸ್ತುತ ಸಮಾಜಕ್ಕೆ ಮೊಗಳ್ಳಿ ಗಣೇಶ್‌ರ ನಿರ್ಭೀತ ಮನೋಧರ್ಮ ಮಾದರಿಯಾಗಿದೆ.

ಸಮಾಜದಲ್ಲಿನ ಅಸಮಾಧಾನದೊಂದಿಗೆ ಹುಟ್ಟುವ ಕ್ರೋಧ, ತಾರತಮ್ಯದ ಧೋರಣೆ, ಅಸಮಾನತೆಯ ಆಕ್ರೋಶಗಳು ಅಪರೂಪದ ಕಥೆಗಾರನನ್ನಾಗಿ ರೂಪಿಸಿತು. ನಿಜ ಮನುಷ್ಯರ ಹುಡುಕಾಟ, ಬದುಕಿನ ಆದರ್ಶನೀಯತೆ, ವಿಶ್ವಮಾನವತ್ವ ಕಥೆಯ ಮುಖ್ಯ ಆಶಯ. 'ಬರೆದು ಹಗುರಾಗಬೇಕು' ಎಂದು ಯಾವಾಗಲೂ ಹೇಳುತ್ತಿದ್ದರು. ಮಹಾರಾಜ ಕಾಲೇಜಿನಲ್ಲಿ ಓದುವಾಗಲೇ ಬರವಣಿಗೆಯ ಹಸಿವು, ಸಾಮಾಜಿಕ ಪರಿವರ್ತನೆಯ ಧ್ಯೇಯ, ವರ್ತಮಾನದ ವೈಚಿತ್ರ್ಯಗಳನ್ನು ಕಣ್ಣಿಗೆ ಕಟ್ಟುವ ಹಾಗೆ ಪತ್ರಿಕೆಗಳಲ್ಲಿ ಬರೆಯುತ್ತಿದ್ದರು. ಬದುಕಿನ ಅಸಹ್ಯಗಳನ್ನು ಅಂತರಂಗದ ಸೆಳೆತದ ಮುಖಾಂತರ ಕಥೆಗಳನ್ನು ರೂಪಿಸುತ್ತಿದ್ದ ಅದ್ಭುತ ಕಲೆಗಾರನಾಗಿದ್ದರು. ಬಂಡಾಯ ಮನೋಧರ್ಮದ ಮೇರು ಪ್ರತಿಭೆಯಾಗಿದ್ದರೆಂದು 'ಮಹಾರಾಜದ ಅಂಗಳದಲ್ಲಿ..' ಎಂಬ ಸಾನೆಟ್‌ನ್ನು ವಾಚಿಸುವ ಮೂಲಕ ಮೊಗಳ್ಳಿ ಗಣೇಶ್ ಅವರ ಬಾಳಿನ ಹಸಿವನ್ನು ಕಟ್ಟಿಕೊಂಡವರು.

ಒಂದು ದಶಕದಿಂದ ಜನಪದ ಜಗತ್ತಿನ ಪರಿಚಯವಾದರು. ಜಾನಪದ ವಿಷಯದ ಬಗ್ಗೆ ಅಪಾರವಾದ ಒಲವಿದ್ದವರು. ರಾಜಕೀಯ ವ್ಯಕ್ತಿಗಳು ಆದರ್ಶಗಳನ್ನು ಪಾಲನೆ ಮಾಡಬೇಕೆಂದು ಹೇಳುತ್ತಿದ್ದರು. ರಾಜಕೀಯ ವಿಚಾರದಿಂದ ದೂರ ಉಳಿದರು. ಶೋಷಿತರ ಬಗ್ಗೆಗಿನ ಆಕ್ರೋಶಗಳನ್ನು ಸಂವಿಧಾನಿಕವಾಗಿ ನಿವಾರಣೆ ಮಾಡುವಲ್ಲಿ ರಾಜಕೀಯದ ಪಾತ್ರ ಅಪಾರವಾಗಿದೆ.

ಸಾಂಸ್ಕೃತಿಕ ಪಲ್ಲಟಗಳನ್ನು ಕುರಿತು ಅಸ್ಪೃಶ್ಯತೆಯ ಕಸುವಿನೊಂದಿಗೆ ಬದುಕಿನ ಹುಡುಕಾಟಗಳು ಮೊಗಳ್ಳಿ ಗಣೇಶ್‌ಅವರ ಕಥೆಗಳಲ್ಲಿ ಅನಾವರಣಗೊಂಡಿವೆ.

ಜಾಗತೀಕರಣ ಅಸ್ಪೃಶ್ಯ ಸಮಾಜದ ಬದುಕನ್ನು ಕಸಿದುಕೊಂಡಿದೆ. ಬಡತನ, ಆಕ್ರೋಶ, ಕೀಳರಿಮೆಗಳು, ಅಸಮಾನತೆ, ದೌರ್ಜನ್ಯ ಹಾಗೂ ದುಃಖ ಕಥೆಗಳ ಕೇಂದ್ರ ಬಿಂದುಗಳಾಗಿದ್ದವು. ಪ್ರಶಸ್ತಿಗಳನ್ನು ಅರಸಿ ಹೋದವರಲ್ಲ. ನಿಷ್ಟುರ ಮನೋಭಾವದ ವ್ಯಕ್ತಿತ್ವ ಉಳ್ಳವರಾಗಿದ್ದರು. ಇವರ ಸಾಹಿತ್ಯ ಕೃತಿಗಳು ಮತ್ತಷ್ಟು ವಿಮರ್ಶೆಗೆ ಒಳಗಾಗಬೇಕೆಂದು ಅಭಿಮತ ಸೂಚಿಸಿದರು.

ದಲಿತ ಬದುಕಿನ ಒಳನೋಟಗಳನ್ನು ಕಟ್ಟಿಕೊಟ್ಟಿದ್ದಾರೆ. ಬುಗುರಿ ಕಥೆಯಲ್ಲಿ ಭಿತ್ತರವಾಗುವ ಮಾನವ ಸಂವೇದನೆ ಜಾಗತಿಕ ಮಟ್ಟದಲ್ಲಿ ಸಮಾಜದ ತಾರತಮ್ಯ ಧೋರಣೆಯ ವಿರುದ್ಧ ತೀವ್ರ ಆಕ್ರೋಶವನ್ನಾ ಬಿಂಬಿಸುತ್ತದೆ. ಬದುಕಿನ ಸತ್ಯಗಳನ್ನು ತಮ್ಮ ಕಥೆಗಳಲ್ಲಿ ಹಲವು ನೈಜ ಪಾತ್ರದೊಂದಿಗೆ ವಿವರಿಸಿದ್ದಾರೆ. ಬರವಣಿಗೆಯ ಬಗ್ಗೆ ಅಪಾರ ಒಲವಿದ್ದು, ನನ್ನಕಾವ್ಯ ಕೃಷಿಗೆ ಪೋಷಕ ಮಾತುಗಳನ್ನಾಡುತ್ತಿದ್ದರು ಎಂದರು. ಕಥೆಗಳಲ್ಲಿ ಸಾಮಾಜಿಕ ಅಸಮಾನತೆಯ ವಿರುದ್ಧದ ಧ್ವನಿ, ಶೋಷಿತರ ಆಕ್ರೋಶ, ಬದುಕಿನ ಸಂಘರ್ಷ, ಬದುಕಿನ ವ್ಯಥೆಗಳು ಅವರನ್ನು ಶ್ರೇಷ್ಠ ಕಥೆಗಾರರನ್ನಾಗಿ ನಿರ್ಮಾಣ ಮಾಡಿತು. ಕನ್ನಡ ಸಾಹಿತ್ಯ ಲೋಕಕ್ಕೆ ಮರೆಯಲಾಗದ ಕೊಡುಗೆಗಳನ್ನು ನೀಡಿದ್ದಾರೆ.

**– ಸಿ.ಎಂ. ಕಿರಣ್‌ಕುಮಾರ್‌ದೇಸಾಯ್**

**ಮನೋಜ್‌ಕುಮಾರ್‌ಜೆ**

# 'ರಾಮಾಯಣ' ಸಾಂಸ್ಕೃತಿಕ ವ್ಯಕ್ತಿತ್ವ ನಿರ್ಮಿಸುವ ಮಹಾಕಾವ್ಯ



ವಾಲ್ಮೀಕಿ ಮಹರ್ಷಿಯು ಸಾರ್ವಕಾಲೀಕ ಶಕ್ತಿ ಸಂಪನ್ನ ಮಹಾಕವಿ. ದೇಶದ ಆಡಳಿತ ನಡೆಸಲು ಒಂದು ಸಂವಿಧಾನವಿದೆ. ಯಾವುದೇ ದೇಶವನ್ನು ಸಾಂಸ್ಕೃತಿಕವಾಗಿಯೂ ಕೂಡ ಆಳ್ವಿಕೆ ಮಾಡಬೇಕಾಗಿದೆ. ಯಾವುದೇ ದೇಶದಲ್ಲಿ ಸಾಂಸ್ಕೃತಿಕ ಆಡಳಿತ ಅನ್ನೋದು ಇಲ್ಲದಿದ್ದರೆ, ಅದರ ಆಡಳಿತ ಸರ್ವಶ್ರೇಷ್ಠವಾಗುವುದಕ್ಕೆ ಸಾಧ್ಯವಿಲ್ಲ. ಒಂದು ರಾಷ್ಟ್ರವನ್ನು ಅತ್ಯಂತ ಮಹತ್ವ ಪೂರ್ಣವಾದ ಸಾಂಸ್ಕೃತಿಕ ನೆಲೆಯಲ್ಲಿ ಜೀವಂತವಾಗಿ ಇಟ್ಟುಕೊಳ್ಳುವುದು ಅತ್ಯಂತ ಅವಶ್ಯಕ. ಈ ಕಾರಣಕ್ಕಾಗಿಯೇ ವಾಲ್ಮೀಕಿ ಮಹರ್ಷಿಗಳು ರಚಿಸಿರುವ ಮಹಾಕಾವ್ಯ ರಾಮಾಯಣ ಇಡೀ ಜಗತ್ತಿಗೆ ಸರ್ವಮಾನ್ಯವಾದದ್ದು ಎಂದು ತಿಳಿಸಿದರು.

ಲೋಕವನ್ನು ಕಾಪಾಡುವ ಸಾಂಸ್ಕೃತಿಕ ಆಡಳಿತದ ಸೂತ್ರಗಳು ಈ ಮಹಾಕಾವ್ಯದಲ್ಲಿ ಅಡಗಿವೆ. ರಾಮಾಯಣ ಸಾವಿರಾರು ವರ್ಷಗಳಿಂದ ಅದೆಷ್ಟೋ ಭಾಷೆಗಳಲ್ಲಿ ಅನುವಾದಗೊಂಡಿದೆ. ಜಗತ್ತಿನಲ್ಲಿ ಅತಿ ಹೆಚ್ಚು ರಾಮಾಯಣ ಕಾವ್ಯವು ರಚನೆಯಾಗಿರುವುದಕ್ಕೆ ಅದು ಮತ್ತೆ ಮತ್ತೆ ಸಾಂಸ್ಕೃತಿಕ ವ್ಯಕ್ತಿತ್ವವನ್ನು ರೂಪಿಸಲು ಸಹಕಾರಿಯಾಗಿದೆ ಎಂದರು.

ಸಾಮಾನ್ಯ ವ್ಯಕ್ತಿಯೊಬ್ಬ ಅಸಾಮಾನ್ಯ ನೆಲೆಗೆ ಏರಿದುದ್ದು ಅದು ಆತ್ಮೋದ್ಧಾರದ ನೆಲೆ. ಪೂರ್ವಾಶ್ರಮದಲ್ಲಿ ಬೇಡನಾಗಿದ್ದ ವಾಲ್ಮೀಕಿ ಮಹರ್ಷಿಯಾಗಿ ಜಗತ್ತಿಗೆ ಬೇಕಾದವನಾದುದ್ದು ಅವನೊಳಗಿರುವ ಮಾನವೀಯತೆಯೇ ಅದಕ್ಕೆ ನಿದರ್ಶನ. ರಾಮಾಯಣ ಆದಿಕಾವ್ಯವಾಗಿ ಅದರಲ್ಲಿರುವ ಜೀವನದ ಮೌಲ್ಯ ಇಂದಿಗೂ ಎಂದೆಂದಿಗೂ ಆದರ್ಶಪ್ರಾಯವಾದದ್ದು. ಮನಶಾಸ್ತ್ರಜ್ಞರ ಪ್ರಕಾರ ಆದರ್ಶಗಳ ಗೈರು ಹಾಜರಿಯಲ್ಲಿ ವರ್ತಮಾನದ ಬದುಕು ಕ್ರೂರವಾಗುತ್ತದೆ ಎಂಬ ಮಾತು ನಗ್ನಸತ್ಯ, ಮನುಷ್ಯ ಜೀವನ ಶ್ರೇಷ್ಠವಾದದ್ದು. ರಾಮಾಯಣದಂತಹ ಮಹಾಕಾವ್ಯಗಳು ಪ್ರತಿಪಾದಿಸುವ ಮೌಲ್ಯಗಳಿಂದ ವ್ಯಕ್ತಿ ಪುರುಷೋತ್ತಮನಾಗಲು ಸಾಧ್ಯವಾಗುತ್ತದೆ. ವಾಲ್ಮೀಕಿ ಮಹರ್ಷಿಗಳು ಕನ್ನಡಿಗರಿಗೆ ಅತ್ಯುನ್ನತ ಸ್ಥಾನಕೊಟ್ಟಿದ್ದಾರೆ. ರಾಮನ ಗೆಲುವು ಹನುಮನ ಗೆಲುವೂ ಹೌದು. ಹನುಮಂತ ಕನ್ನಡಿಗ. ಒಟ್ಟಾರೆ ರಾಮಾಯಣದ ಎರಡನೇ ಭಾಗ ಕನ್ನಡಿಗರ ವಿಜಯ. ಆದ್ದರಿಂದ ಭಾರತೀಯರಾದ ನಾವು ನಮ್ಮ ಮಹಾಕಾವ್ಯವಾದ ರಾಮಾಯಣವನ್ನು ಹಾಗೂ ಅದನ್ನು ರಚಿಸಿದ ಮಹಾಕವಿ ವಾಲ್ಮೀಕಿ ಮಹರ್ಷಿಯನ್ನೂ ಬೇರೆಯವರಿಗಿಂತ ಹತ್ತು ಪಟ್ಟು ಹೆಚ್ಚು ಗೌರವಿಸಬೇಕಾಗಿದೆ.

ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಗೆ ಅನನ್ಯವಾದ ಕೊಡುಗೆ ನೀಡಿದ ಆದಿಕವಿ ಮಹರ್ಷಿ ವಾಲ್ಮೀಕಿಯನ್ನು ನಾವೆಲ್ಲಾ ಗೌರವದಿಂದ ಸ್ಮರಿಸಬೇಕಾದ ದಿನವಿದು.ರಾಮಾಯಣ ಭಾವನೆಗಳ ಸಂಗಮ, ಮಹಾಕಾವ್ಯಗಳು ನಮ್ಮೊಳಗಿನ ಒಳಿತು, ಕೆಡಕುಗಳ ಸಂಘರ್ಷವಾಗಿದೆ. ರಾಮಾಯಣ ಓದುಗರಿಗೆ ನಿರಂತರವಾಗಿ ಒಂದು ಹೊಸ ಆಲೋಚನೆಗಳಿಗೆ ಎಡೆಮಾಡಿಕೊಡುತ್ತದೆ. ಕ್ರೂರಿಯಾಗಿದ್ದ ಬೇಡನೊಬ್ಬನಲ್ಲಿ ಮಾತೃತ್ವಭಾವನೆ ಉದ್ದೀಪನಗೊಂಡಿದ್ದು ಇಂದು ಇತಿಹಾಸವಾಗಿದೆ. ಅಂದರೆ ಎಲ್ಲರೊಳಗೂ ಮನುಷ್ಯತ್ವ ಇರುತ್ತದೆ ಅದನ್ನು ಕಂಡುಕೊಳ್ಳಬೇಕು. ವಿವೇಚನೆ, ಆದರ್ಶಯುತ ಜೀವನ, ಬದುಕಿನ ಸುಖ ಹಾಗೂ ಜೀವನ ಮೌಲ್ಯಕ್ಕೆ ವಿದ್ಯಾರ್ಥಿಗಳು ಮಹಾಕಾವ್ಯವನ್ನು ಓದಬೇಕು. ಹೂವು ಹೇಗೆ ತನಗೆ ತಾನೆ ಅರಳುವುದೋ ಹಾಗೆ ವ್ಯಕ್ತಿಯೊಳಗಿನ ಶಕ್ತಿ ಅರಳಲು ಮಹಾಕಾವ್ಯ ಅನುವು ಮಾಡಿಕೊಡುತ್ತದೆ.

**– ರೋಹನ್ ಎಂ.ವಿ.**
ಬಿಬಿಎ ಅಂತಿಮ ವರ್ಷ

# ವಿಭಾಗದ ಕಾರ್ಯಕ್ರಮಗಳು

## ಮೊಗಳ್ಳಿ ಗಣೇಶ್: ಬಾಳಿನ ಹಸಿವು–ಕತೆಗಳ ಕಸುವು – 27.10.2025

ವಿಷಯ ಮಂಡಕರು: **ಶ್ರೀ. ಸ್ವಾಮಿ ಆನಂದ್,** ಪ್ರಗತಿಪರ ಚಿಂತಕರು, ಮೈಸೂರು

**ಪ್ರೊ. ಮೈಸೂರು ಕೃಷ್ಣಮೂರ್ತಿ,** ನಿವೃತ್ತ ಕನ್ನಡ ಪ್ರಾಧ್ಯಾಪಕರು, ಮೈಸೂರು

**ಡಾ. ಮಂಜು ಹೆಚ್ ಪಿ,** ಉಪನ್ಯಾಸಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು








